ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳಲ್ಲಿ ಪ್ರಕಟಿತ

# ಪ್ರಜಾ ಪ್ರಗತಿ

ತುಮಕೂರು | Tumakuru

ಸಂಪಾದಕರು : ಎಸ್. ನಾಗಣ್ಣ

E-mail : prajapragathi1@gmail.com
Web : prajapragathi.com



ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್: ಇಂದು ಮಧ್ಯಾಹ್ನ 3ಕ್ಕೆ ನ್ಯೂಜಿಲೆಂಡ್ –ಬಾಂಗ್ಲಾದೇಶ ನಡುವೆ ಪಂದ್ಯ



ರೋಹನ್ ಬೋಪಣ್ಣ – ಗೇಬ್ರಿಯೆಲಾ ದಬ್ರೋವ್‌ಸ್ಕಿ ಜೋಡಿಗೆ ಫ್ರೆಂಚ್ ಓಪನ್ ಕಿರೀಟ

4 ತಿಂಗಳೊಳಗೆ ಅರ್ಜಿ ಸಲ್ಲಿಸಿರುವ ಎಲ್ಲರಿಗೂ ಬಿಪಿಎಲ್ ಕಾರ್ಡ್ : ಸಚಿವ ಯು.ಟಿ.ಖಾದರ್

ವಿವರ : ಪುಟ 5






# ಎಚ್ಚರ.! ಮಾರಾಟವಾಗುತ್ತಿದೆ ಪ್ಲಾಸ್ಟಿಕ್ ಮಿಶ್ರಿತ ಸಕ್ಕರೆ

**ತುಮಕೂರು**

ರಾಜ್ಯದ ಹಲವು ಕಡೆ ಪ್ಲಾಸ್ಟಿಕ್ ಅಕ್ಕಿ ಮತ್ತು ಸಕ್ಕರೆ ಮಾರಾಟವಾಗುತ್ತಿರುವ ಬಗ್ಗೆ ಹಲವು ತಿಂಗಳುಗಳಿಂದ ವರದಿಗಳು ಕೇಳಿಬರುತ್ತಿದ್ದವು. ತುಮಕೂರು ನಗರದಲ್ಲಿಯೂ ಇಂತಹ ವದಂತಿಗಳು ಆಗಾಗ್ಗೆ ಹಬ್ಬಿದ್ದವು. ಇದು ಸತ್ಯವೆಂಬಂತೆ ಇದೀಗ ನಗರದ ಅಂಗಡಿಯೊಂದರಲ್ಲಿ ಪ್ಲಾಸ್ಟಿಕ್ ಮಿಶ್ರಿತ ಸಕ್ಕರೆ ದೊರೆತಿರುವುದು ಗ್ರಾಹಕರನ್ನು ಬೆಚ್ಚಿಬೀಳುವಂತೆ ಮಾಡಿದೆ.

ತುಮಕೂರು ತಾಲ್ಲೂಕು ಅರಕೆರೆ ಬಳಿಯ ಅರಸಪ್ಪನಪಾಳ್ಯದ ಲಕ್ಷ್ಮೀನಾರಾಯಣ ಎಂಬುವರು ಕಳೆದ ನಾಲ್ಕು ದಿನಗಳ ಹಿಂದೆ ಅಂತರಸನಹಳ್ಳಿಯ ಮಾರುಕಟ್ಟೆಯ ಅಂಗಡಿಯೊಂದರಲ್ಲಿ ಮನೆಗೆ ಸಕ್ಕರೆ ಖರೀದಿಸಿದ್ದಾರೆ. ಮೂರು ಕೆ.ಜಿ. ಸಕ್ಕರೆ ಪೈಕಿ ಈಗಾಗಲೇ ಒಂದು ಕೆ.ಜಿ. ಸಕ್ಕರೆಯನ್ನು ಉಪಯೋಗಿಸಿದ್ದಾರೆ. ಕಾಫಿ ಮತ್ತು ಟೀಗಾಗಿ ಸಕ್ಕರೆಯನ್ನು ಬಳಕೆ ಮಾಡಿದ್ದಾರೆ.

ಗುರುವಾರ ಮಧ್ಯಾಹ್ನ ಮನೆಗೆ ಸಂಬಂಧಿಕರು ಆಗಮಿಸಿದ್ದರಿಂದ ಅವರುಗಳಿಗೆ ಜೂಸ್ ತಯಾರಿಸಿಕೊಡಲು ಹೋದಾಗ ಸಕ್ಕರೆಯ ಬಗ್ಗೆ ಅನುಮಾನ ಬಂದಿದೆ. ಸಕ್ಕರೆಯನ್ನು ನೀರಿನೊಳಗೆ ಹಾಕಿ ಆನಂತರ ಸೋಸಲು ಹೋದಾಗ ಅದರಲ್ಲಿ ಪ್ಲಾಸ್ಟಿಕ್ ಮಿಶ್ರಿತ ಸಕ್ಕರೆ ಇದ್ದುದು ಪತ್ತೆಯಾಗಿದೆ. ಸಕ್ಕರೆ ಅಂಶ ಕರಗಿದ್ದರೆ, ಪ್ಲಾಸ್ಟಿಕ್ ಸಕ್ಕರೆ ಹಾಗೆಯೇ ಉಳಿದಿದೆ. ಜೂಸ್ ಕುಡಿದಾಗಲೂ ಅದು ಒಂದು ರೀತಿಯ ಕಹಿ ಅನುಭವ ನೀಡಿತೆಂದು ಲಕ್ಷ್ಮೀನಾರಾಯಣ ಹೇಳುತ್ತಾರೆ.

ಸಕ್ಕರೆಯಲ್ಲಿ ಪ್ಲಾಸ್ಟಿಕ್ ಇರುವ ಬಗ್ಗೆ ಸಂಬಂಧಿಕರ ಬಳಿ ಹೇಳಿ ನಂತರ ಸದರಿ ಸಕ್ಕರೆಯನ್ನು 'ಪ್ರಜಾಪ್ರಗತಿ ಪತ್ರಿಕಾಲಯಕ್ಕೆ ತಂದು ತೋರಿಸಿದರು. ಪತ್ರಿಕಾಲಯದಲ್ಲಿಯೇ ಸಕ್ಕರೆಯನ್ನು ಪರಿಶೀಲಿಸಲಾಯಿತು. ನಂತರ ಹಿರಿಯ ಆರೋಗ್ಯ ಸುರಕ್ಷತಾ ಅಧಿಕಾರಿ ನಾಗರಾಜು ಅವರಿಗೆ ಈ ಮಾಹಿತಿ ನೀಡಲಾಗಿ ಅವರೂ ಸಹ ಪತ್ರಿಕಾಲಯಕ್ಕೆ ಆಗಮಿಸಿ ಸಕ್ಕರೆ ಪರಿಶೀಲಿಸಿದರು. ಅದರಲ್ಲಿ ಪ್ಲಾಸ್ಟಿಕ್ ಮಿಶ್ರಣ ಆಗಿರುವುದನ್ನು ಖಚಿತಪಡಿಸಿಕೊಂಡರು.

ಅಂತರಸನಹಳ್ಳಿ ಮಾರುಕಟ್ಟೆಯಲ್ಲಿರುವ ಎಂ.ಬಿ.ಟಿ. ಅಂಗಡಿಗೆ ತೆರಳಿ ಅಲ್ಲಿ ಸಕ್ಕರೆಯನ್ನು ಪರಿಶೀಲಿಸಿದಾಗ ಸ್ವಲ್ಪ ಪ್ರಮಾಣದಲ್ಲಿ ಪ್ಲಾಸ್ಟಿಕ್ ಇದ್ದುದು ಕಂಡುಬಂದಿತು. ಸದರಿ ಸಕ್ಕರೆಯನ್ನು ಬೆಂಗಳೂರಿನ ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಗುವುದು. ಒಂದು ವೇಳೆ ಇದು ಪ್ಲಾಸ್ಟಿಕ್ ಸಹಿತ ಸಕ್ಕರೆಯೆಂದು ದೃಢಪಟ್ಟರೆ ಸಕ್ಕರೆಯನ್ನು ಉತ್ಪಾದಿಸಿದವರು, ವಿತರಕರು ಹಾಗೂ ಅಂಗಡಿಯ ಮಾಲೀಕರ ಮೇಲೆ ಆಹಾರ ಸುರಕ್ಷತಾ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗುವುದು ಎಂದು 'ಪ್ರಗತಿಗೆ ವಿವರಿಸಿದರು.

ಇದು ಒಂದು ಅಂಗಡಿಯಲ್ಲಿ ಕಂಡು ಬಂದ ಚಿತ್ರಣ. ಬಹುಶಃ ಅಂಗಡಿಯವರಿಗೆ ಇದು ಯಾವ ≫ 6ನೇ ಪುಟಕ್ಕೆ

> **ಸಕ್ಕರೆಯನ್ನು ಬೆಂಗಳೂರಿನ ಪ್ರಯೋಗಾಲಯಕ್ಕೆ ಕಳುಹಿಸಿ ಕೊಡಲಾಗುವುದು. ಒಂದು ವೇಳೆ ಇದು ಪ್ಲಾಸ್ಟಿಕ್ ಸಹಿತ ಸಕ್ಕರೆಯೆಂದು ದೃಢಪಟ್ಟರೆ ಸಕ್ಕರೆಯನ್ನು ಉತ್ಪಾದಿಸಿದವರು, ವಿತರಕರು ಹಾಗೂ ಅಂಗಡಿಯ ಮಾಲೀಕರ ಮೇಲೆ ಆಹಾರ ಸುರಕ್ಷತಾ ಕಾಯ್ದೆಯಡಿ ಕ್ರಮ ಕೈಗೊಳ್ಳಲಾಗುವುದು.**
>
> **-ನಾಗರಾಜು, ಆಹಾರ ಸುರಕ್ಷತಾ ಅಧಿಕಾರಿ**



ಅಂಗಡಿಯಲ್ಲಿ ಖರೀದಿಸಿದ ಸಕ್ಕರೆ ಮೊದಲ ಕವರ್‌ನಲ್ಲಿರುವುದು. ನೀರಿಗೆ ಹಾಕಿದಾಗ ಕರಗದೆ ಉಳಿದ ಪ್ಲಾಸ್ಟಿಕ್ ಸಕ್ಕರೆ ಎರಡನೆ ಕವರ್‌ನಲ್ಲಿರುವುದು.






ಅಂತರಸನಹಳ್ಳಿ ಅಂಗಡಿಯೊಂದಕ್ಕೆ ಭೇಟಿ ನೀಡಿದ ಆಹಾರ ಸುರಕ್ಷತಾ ಅಧಿಕಾರಿಗಳು ಸಕ್ಕರೆಯನ್ನು ಪರಿಶೀಲಿಸುತ್ತಿರುವುದು. ಅಲ್ಲಿ ದೊರೆತ ಸಕ್ಕರೆ ಚೀಲದಲ್ಲಿ ಸಕ್ಕರೆಯನ್ನು ಪ್ರಯೋಗಾಲಯಕ್ಕೆ ಕಳುಹಿಸಿಕೊಡಲಾಯಿತು.

## 6 ನೇ ರಾಜ್ಯ ವೇತನ ಆಯೋಗ ರಚನೆ



**ಬೆಂಗಳೂರು**

ಪ್ರಸಕ್ತ ಆಯವ್ಯಯ ಭಾಷಣದಲ್ಲಿ ಘೋಷಿಸಿದಂತೆ, ರಾಜ್ಯ ಸರ್ಕಾರಿ ನೌಕರರ ಬೇಡಿಕೆಗಳನ್ನು ಪರಿಶೀಲಿಸಲು 6 ನೇ ರಾಜ್ಯ ವೇತನ ಆಯೋಗವನ್ನು ರಚಿಸಲಾಗಿರುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದರು. ಪದವೀಧರ ಕ್ಷೇತ್ರದಿಂದ ಚುನಾಯಿತರಾದ ವಿಧಾನ ಪರಿಷತ್ತಿನ ಸದಸ್ಯ ಕೆ.ಬಿ. ಶ್ರೀಕಂಠೇಗೌಡರ ಪ್ರಶ್ನೆಗೆ ಉತ್ತರಿಸಿ, ರಾಜ್ಯ ಸರ್ಕಾರಿ ನೌಕರರ ವೇತನ ಮತ್ತು ಭತ್ಯೆಗಳಿಗೆ ಸೇರಿದಂತೆ ಪಿಂಚಣಿ, ತುಟ್ಟಿಭತ್ಯೆ ಮುಂತಾದ ಭತ್ಯೆಗಳನ್ನು ಪರಿಷ್ಕರಿಸುವ ವಿಷಯಗಳ ಬಗ್ಗೆ ಅಧ್ಯಯನ ಮಾಡಿ ಸರ್ಕಾರಕ್ಕೆ ವರದಿ ಸಲ್ಲಿಸುವುದು. 6 ನೇ ರಾಜ್ಯ ವೇತನ ಆಯೋಗವು ಒಬ್ಬರು ಅಧ್ಯಕ್ಷರು ಮತ್ತು ಇಬ್ಬರು ಸದಸ್ಯರುಗಳನ್ನು ಒಳಗೊಂಡಿರುತ್ತದೆ ಎಂದು ಸದಸ್ಯರ ಪ್ರಶ್ನೆಗೆ ಉತ್ತರಿಸಿದರು.

## ತುಮಕೂರು ಮಹಾನಗರಪಾಲಿಕೆ ವಾರ್ಡ್‌ಗಳ ಕ್ಷೇತ್ರ ಪುನರ್ ವಿಂಗಡಣೆ

**ತುಮಕೂರು**

ತುಮಕೂರು ಮಹಾನಗರಪಾಲಿಕೆಯ ವಾರ್ಡ್‌ಗಳ ಕ್ಷೇತ್ರ ಪುನರ್ ವಿಂಗಡಣೆ ಕುರಿತು ಸಾರ್ವಜನಿಕರಿಂದ ಆಕ್ಷೇಪಣೆ ಪಡೆಯಲು ಜಿಲ್ಲಾಧಿಕಾರಿಗಳ ಕಛೇರಿಯಿಂದ ಅಧಿಸೂಚನೆ ಸಂಖ್ಯೆ: ಡಿಯುಡಿಸಿ/ಚುನಾ/ಸಿಆರ್/132/(ತುಮಪಾ)2015-16 ದಿನಾಂಕ:22-02-2017 ರನ್ವಯ ಅಧಿಸೂಚನೆ ಹೊರಡಿಸಲಾಗಿದೆ.

ಸರ್ಕಾರದ ಆದೇಶ ಸಂಖ್ಯೆ:ಯುಡಿಡಿ/4/ಎಂಎಲ್‌ಆರ್/2014 ದಿನಾಂಕ:15-2-2014ರನ್ವಯ ಮಹಾನಗರಪಾಲಿಕೆಯ ವಾರ್ಡ್‌ಗಳ ಕ್ಷೇತ್ರ ಪುನರ್ ವಿಂಗಡಣೆಯ ಕುರಿತು ಕರಡು ಅಧಿಸೂಚನೆಯನ್ನು ಹೊರಡಿಸುವ ಅಧಿಕಾರವು ಸರ್ಕಾರಕ್ಕೆ ಪ್ರದತ್ತವಾಗಿರುತ್ತದೆ. ಆದ್ದರಿಂದ ಈ ಕಛೇರಿಯಿಂದ ದಿನಾಂಕ:22-2-2017ರಂದು ಹೊರಡಿಸಿದ ಕರಡು ಅಧಿಸೂಚನೆಯನ್ನು ಹಿಂಪಡೆಯಲಾಗಿದೆ ಎಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ತ್ರಿಚಕ್ರ ವಾಹನ ವಿವಾದ:ಸಭಾ ನಿರ್ಣಯದಲ್ಲಿ ಮಾಯ!

**ತುಮಕೂರು**

ನಿರ್ದಿಷ್ಟ ಕಂಪನಿಯ ಬದಲು ಇನ್ನೊಂದು ಕಂಪನಿಯ ತ್ರಿಚಕ್ರ ವಾಹನಗಳನ್ನು ವಿಕಲಚೇತನರಿಗೆ ವಿತರಿಸಿದ ವಿವಾದಾತ್ಮಕ ಕ್ರಮವು ತುಮಕೂರು ಮಹಾನಗರ ಪಾಲಿಕೆಯ ಸಾಮಾನ್ಯಸಭೆಯಲ್ಲಿ ತೀವ್ರ ಚರ್ಚೆಗೆ ಎಡೆ ಮಾಡಿ, ಸ್ಥಾಯಿ ಸಮಿತಿ ಸದಸ್ಯತ್ವಕ್ಕೆ ಒಬ್ಬ ಸದಸ್ಯರು ರಾಜಿನಾಮೆ ಸಲ್ಲಿಸಿದ ಘಟನೆಯವರೆಗೆ ಹೋಯಿತಾದರೂ, ಆನಂತರದ ಸಭಾ ನಿರ್ಣಯದ ಪ್ರತಿಯಲ್ಲಿ ಇವೆಲ್ಲ ಪ್ರಸಂಗಗಳನ್ನು ಯಥಾವತ್ತಾಗಿ ದಾಖಲಿಸದೆ ತಿಪ್ಪೆ ಸಾರಿಸುವಂತೆ ಮಾಡಿರುವುದು ಚರ್ಚೆಗೆಡೆಮಾಡಿಕೊಟ್ಟಿದೆ.

ತುಮಕೂರು ಮಹಾನಗರ ಪಾಲಿಕೆ ಇತ್ತೀಚೆಗೆ ವಿಕಲ ಚೇತನರಿಗೆ ಹೀರೋ ಡುಯೆಟ್ ಎಂಬ ಬ್ರಾಂಡ್‌ನ ತ್ರಿಚಕ್ರ ವಾಹನಗಳನ್ನು ವಿತರಿಸಿದ್ದು ತೀವ್ರ ವಿವಾದ ಹುಟ್ಟು ಹಾಕಿತ್ತು. ಕಳೆದೆರಡು ಸಾಲುಗಳಿಂದ ಹೊಂಡಾ ಆಕ್ಟೀವಾ ಕಂಪನಿಯ ತ್ರಿಚಕ್ರ ವಾಹನಗಳನ್ನು ವಿತರಿಸಿದ್ದು, ಈ ಸಾಲಿನಲ್ಲಿ ಅದರ ಬದಲಾಗಿ ಹೀರೋ ಡುಯೆಟ್ ಕಂಪನಿಯ ತ್ರಿಚಕ್ರ ವಾಹನ ವಿತರಿಸಿದ್ದು ಏಕೆಂಬುದು ಈ ವಿವಾದದ ಮೂಲ ಪ್ರಶ್ನೆ ಆಗಿತ್ತು.




ಮೇ 24 ರಂದು ಮೇಯರ್ ಎಚ್. ರವಿಕುಮಾರ್ ಅಧ್ಯಕ್ಷತೆಯಲ್ಲಿ ನಡೆದಿದ್ದ ಪಾಲಿಕೆಯ ಸಾಮಾನ್ಯ ಸಭೆಯಲ್ಲಿ ಕಾಂಗ್ರೆಸ್ ಸದಸ್ಯೆ ಹಾಗೂ ಮಾಜಿ ಉಪಮೇಯರ್ ಧನಲಕ್ಷ್ಮೀ ರವಿ (33 ನೇ ವಾರ್ಡ್) ಅವರು ಈ ವಿಷಯ ಪ್ರಸ್ತಾಪಿಸಿದ್ದು ಬಿಸಿ-ಬಿಸಿ ಚರ್ಚೆಗೆ ಎಡೆಮಾಡಿತು. ಈ ಹಿಂದೆ ನಡೆದಿದ್ದ ಆರೋಗ್ಯ ಸ್ಥಾಯಿ ಸಮಿತಿ ಸಭೆಯಲ್ಲೇ ತಾವು ಇದನ್ನು ವಿರೋಧಿಸಿ ಹೊಂಡಾ ಆಕ್ಟೀವಾ ವಾಹನಗಳನ್ನೇ ವಿತರಿಸಬೇಕೆಂದು ಒತ್ತಾಯಿಸಿದ್ದನ್ನು ಹಾಗೂ ಆ ಸಭೆಯಲ್ಲಿ ಮೇಯರ್ ಆದಿಯಾಗಿ ಇತರ ಸದಸ್ಯರು ಏನೇನು ಹೇಳಿದರೆಂಬುದನ್ನು ಅವರು ಉಲ್ಲೇಖಿಸಿದ್ದು ವಾಗ್ವಾದಕ್ಕೂ ಕಾರಣವಾಯಿತು.

ಆರೋಗ್ಯ ಸ್ಥಾಯಿ ಸಮಿತಿ ಸಭೆಯಲ್ಲಿ ಕೈಗೊಳ್ಳಲಾದ ನಿರ್ಣಯದಲ್ಲಿ ತಾವು ಹೇಳಿದ ಭಿನ್ನಾಭಿಪ್ರಾಯಗಳನ್ನು ದಾಖಲಿಸಿಯೇ ಇಲ್ಲ. ಅಂದಿನ ಸಭೆಗೆ ನೀಡಿದ್ದ ಅಜೆಂಡಾದಲ್ಲಿ ಹೊಂಡಾ ಆಕ್ಟೀವಾ ಎಂದು ಇದ್ದುದನ್ನು ಬಳಿಕ ತೆಗೆದು ಹಾಕಲಾಗಿದೆ. ಆ ಸಭೆಯಲ್ಲಿ ಯಾರು-ಯಾರು ಏನೇನು ಹೇಳಿದರು ಎಂಬುದನ್ನೂ ತ್ರಿಚಕ್ರ ವಾಹನಕ್ಕೆ ಸಂಬಂಧಿಸಿದ ನಿರ್ಣಯದಲ್ಲಿ ದಾಖಲಿಸಿಲ್ಲ ಎಂದು ಸಾಮಾನ್ಯ ಸಭೆಯಲ್ಲಿ ಧನಲಕ್ಷ್ಮೀ ರವಿ ಅವರು ಬಲವಾಗಿ ಆಕ್ಷೇಪಿಸಿದರು.

ಮತ್ತೂ ಒಂದು ಹೆಜ್ಜೆ ಮುಂದುವರಿದ ಧನಲಕ್ಷ್ಮೀ ರವಿ ಅವರು ಆರೋಗ್ಯ ಸ್ಥಾಯಿ ಸಮಿತಿ ಸದಸ್ಯತ್ವಕ್ಕೆ ರಾಜಿನಾಮೆ ಸಲ್ಲಿಸುತ್ತಿರುವುದಾಗಿ ಸಭೆಯಲ್ಲೇ ಪ್ರಕಟಿಸಿ, ರಾಜಿನಾಮೆ ಪತ್ರವನ್ನೂ ನೀಡಿ ಬಿಟ್ಟರು.

**ಸಭಾ ನಿರ್ಣಯದಲ್ಲಿ ಏನಿದೆ?:** ಆದರೆ ಮೇ 24 ರ ಸಾಮಾನ್ಯ ಸಭೆಯ ಸಭಾ ನಿರ್ಣಯದ ವಿವರದಲ್ಲಿ ಈ ಪ್ರಸಂಗವನ್ನು ಹೀಗೆ ದಾಖಲಿಸಲಾಗಿದೆ:-

''ಧನಲಕ್ಷ್ಮೀ ರವಿ ರವರು ಹೋಂಡಾ ಆಕ್ಟೀವಾ ತ್ರಿಚಕ್ರ ವಾಹನವನ್ನು ಖರೀದಿಸಲು ಸಭೆಯಲ್ಲಿ ತೀರ್ಮಾನಿಸಲಾಗಿದ್ದು, ಸಭೆಯಲ್ಲಿ ತೀರ್ಮಾನಿಸಿದಂತೆ ಏಕೆ ಕ್ರಮ ವಹಿಸಲಾಗಿಲ್ಲ ಎಂದು ಪ್ರಶ್ನಿಸಿದರು. ಯೂಸುಫ್ ಖಾನ್ ರವರು ಮಾತನಾಡಿ ತ್ರಿಚಕ್ರ ವಾಹನವನ್ನು ಖರೀದಿಸಿ ಅಂಗವಿಕಲರಿಗೆ ನೀಡಬೇಕಾಗಿರುವುದರಿಂದ ಎಲ್ಲರ ಅಭಿಮತ ≫ 6ನೇ ಪುಟಕ್ಕೆ

# ನಂದಿನಿ ಉತ್ಪನ್ನ ಬಳಸಿ ರೈತರಿಗೆ ಸಹಕಾರಿಯಾಗಿ

**ಕುಣಿಗಲ್**

ಸಾರ್ವಜನಿಕರು ಬಣ್ಣ ಬಣ್ಣದ ಆಕರ್ಷಕ ಖಾಸಗಿ ಹಾಲು ಉತ್ಪನ್ನಗಳಿಗೆ ಮಾರು ಹೋಗದೆ ಹೆಚ್ಚು ಸ್ವಾದಿಷ್ಟ ಹಾಗೂ ಆರೋಗ್ಯಭರಿತ ನಂದಿನಿ ಉತ್ಪನ್ನಗಳನ್ನು ಉಪಯೋಗಿಸುವಂತೆ ಕರ್ನಾಟಕ ಸಹಕಾರ ಹಾಲು ಉತ್ಪನ್ನಗಳ ಫೆಡರೇಷನ್‌ನ ಮಾರುಕಟ್ಟೆ ವಿಭಾಗದ ಉಪನಿರ್ದೇಶಕ ಕೆ.ಎಸ್. ಸೋಮಶೇಖರ ಮನವಿ ಮಾಡಿದರು.

ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳ ಹಾಗೂ ರಾಜ್ಯ ಪಡಿತರ ವಿತರಕರ ಸಂಘ ಪಟ್ಟಣದಲ್ಲಿ ಹಮ್ಮಿಕೊಂಡಿದ್ದ ನಂದಿನಿ ಉತ್ಪನ್ನಗಳ ವಿಶೇಷ ಅರಿವು ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಜನರು ನಂದಿನಿ ಹಾಲಿನಿಂದ ಕೇವಲ ಮೊಸರು, ತುಪ್ಪ, ಪೇಡಗಳನ್ನು ಮಾತ್ರ ಉತ್ಪಾದಿಸಲಾಗುತ್ತಿದೆ ಎಂದು ತಿಳಿದುಕೊಂಡಿದ್ದಾರೆ. ಆದರೆ, ನಂದಿನಿ ಡೈರಿ 64ಕ್ಕೂ ಹೆಚ್ಚು ವಿವಿಧ ಬಗೆಯ ಉತ್ಪನ್ನಗಳನ್ನು ಮಾರುಕಟ್ಟೆಗೆ ಬಿಡುಗಡೆ ಮಾಡಿದೆ. ಅವುಗಳ ಪೈಕಿ ಬರ್ಫಿ, ಮೈಸೂರು ಪಾಕ್, ರಸಗುಲ್ಲ ಪ್ರಮುಖವಾದ ಉತ್ಪನ್ನಗಳಾಗಿವೆ. ಡೈರಿ ವೈಟರ್ ಎಂಬ ಹೊಸ



ಉತ್ಪನ್ನವನ್ನು ಮಾರುಕಟ್ಟೆಗೆ ಪರಿಚಯಿಸಿದ್ದು, ಅದರಲ್ಲಿ ಸಕ್ಕರೆ ಅಂಶವನ್ನು ಸೇರಿಸಲಾಗಿದ್ದು, ಕಾಫಿ, ಟೀ ತಯಾರಿಸುವಾಗ ಸಕ್ಕರೆಯನ್ನು ಸೇರಿಸುವ ಅಗತ್ಯವಿಲ್ಲ. ಶೇ.10ರಷ್ಟು ರಿಯಾಯಿತಿ ದರದಲ್ಲಿ ಇದನ್ನು ಮಾರಾಟ ಮಾಡಲಾಗುತ್ತಿದೆ. ಇದರಿಂದ ರೈತರಿಗೆ ಮತ್ತು ಎಲ್ಲ ವರ್ಗದವರಿಗೂ ಆರ್ಥಿಕವಾಗಿ ಅನುಕೂಲವಾಗಿದೆ ಎಂದ ಅವರು, ಖಾಸಗಿ ಹಾಲು ಉತ್ಪನ್ನ ಕೇಂದ್ರಗಳು ಜನರನ್ನು ಮರಳು ಮಾಡುತ್ತಾ ಜನರ ಆರೋಗ್ಯವನ್ನು ಹಾಳು ಮಾಡುತ್ತಿವೆ. ಈ ಬಗ್ಗೆ ಜನರು ಜಾಗರೂಕರಾಗಿರಬೇಕು ಎಂದು ಕಿವಿ ಮಾತು ಹೇಳಿದರು. ಇದೇ ಸಂದರ್ಭದಲ್ಲಿ ಸಾರ್ವಜನಿಕರಿಗೆ ನಂದಿನಿ ವೈಟರ್‌ನಿಂದ ತಯಾರಿಸಿದ ಟೀ ಅನ್ನು ವಿತರಿಸಿದರು. ಮುಖಂಡರಾದ ಸುರೇಶ್, ಶಿವಣ್ಣ , ರೇಣುಕಪ್ಪ ಮತ್ತಿತರರು ಇದ್ದರು.

## ಮರು ಮೌಲ್ಯಮಾಪನ ಇಲ್ಲ

**ಬೆಂಗಳೂರು**

ವೈದ್ಯಕೀಯ ಶಿಕ್ಷಣದ ಎಂಬಿಬಿಎಸ್ ಹಾಗೂ ಇತರ ವ್ಯಾಸಂಗಗಳಲ್ಲಿ ಮರುಮೌಲ್ಯಮಾಪನ ಅಥವಾ ಮರು ಎಣಿಕೆ ಪದ್ಧತಿ ಕಾರ್ಯರೂಪಕ್ಕೆ ತರುವುದಿಲ್ಲ ಎಂದು ವೈದ್ಯಕೀಯ ಶಿಕ್ಷಣ ಸಚಿವ ಡಾ.ಶರಣಪ್ರಕಾಶ್ ಪಾಟೀಲ್ ಸ್ಪಷ್ಟಪಡಿಸಿದ್ದಾರೆ.

ಬಿಜೆಪಿ ಶಾಸಕಿ ಶಶಿಕಲಾ ಜೊಲ್ಲೆ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, ವಿದ್ಯಾರ್ಥಿಗಳ ಉತ್ತರ ಪತ್ರಿಕೆಗಳನ್ನು ಮರುಮೌಲ್ಯಮಾಪನ ಅಥವಾ ಮರು ಎಣಿಕೆ ≫ 10ನೇ ಪುಟಕ್ಕೆ




# ಕಲಾಪದಲ್ಲಿ ಪಾಲ್ಗೊಳ್ಳಲು ಶಾಸಕರ ನಿರಾಸಕ್ತಿ
## ದಿನೇ ದಿನೇ ಕುಸಿಯುತ್ತಿರುವ ಹಾಜರಾತಿ ಪ್ರಮಾಣ

**ಬೆಂಗಳೂರು**

ವಿಧಾನ ಸಭೆಯ ಕಲಾಪದಲ್ಲಿ ಶಾಸಕರು ಮತ್ತು ಸಚಿವರ ಹಾಜರಾತಿ ಪ್ರಮಾಣ ದಿನೇ ದಿನೇ ಕುಸಿಯುತ್ತಲೇ ಇದೆ. ಶಾಸಕರ ಅನುದಾನ, ಪ್ರಯಾಣ ಭತ್ಯೆ, ಸದನ ಕಲಾಪ ಭತ್ಯೆ, ಮಾಸಿಕ ವೇತನ, ಹೀಗೆ ಎಲ್ಲವನ್ನೂ ಪಡೆಯುವ ಶಾಸಕರು ಕಲಾಪದಲ್ಲಿ ಪಾಲ್ಗೊಳ್ಳಲು ನಿರಾಸಕ್ತಿ ತೋರಿಸುತ್ತಿರುವುದು ತೀವ್ರ ಕಳವಳಕ್ಕೆ ಕಾರಣವಾಗಿದೆ.

ಜನರ ಪ್ರತಿನಿಧಿಗಳಾಗಿ ಶಾಸಕರನ್ನು, ಸಂಸದರನ್ನು ಆಯ್ಕೆ ಮಾಡಿ, ಶಾಸನ ಸಭೆಗಳಿಗೆ ಕಳುಹಿಸುತ್ತಾರೆ. ಆದರೆ ಶಾಸನ ರಚನೆ, ಸರ್ಕಾರ ಮತ್ತು ಪ್ರಜೆಗಳ ನಡುವಿನ ಸಂಪರ್ಕ ಸೇತುವಾಗಿ ಕಾರ್ಯ ನಿರ್ವಹಿಸುವುದು ಶಾಸಕರ ಪ್ರಮುಖ ಕರ್ತವ್ಯ. ಈ ಕರ್ತವ್ಯ ನಿರ್ವಹಣೆ ಮಾಡಬೇಕಾದರೆ, ವರ್ಷದಲ್ಲಿ ನಾಲ್ಕು ಬಾರಿ ನಡೆಯುವ ವಿಧಾನ ಮಂಡಳ ಅಧಿವೇಶನದಲ್ಲಿ ಶಾಸಕರು ಭಾಗಿಯಾಗಲೇ ಬೇಕು. ಆದರೆ, ಇತ್ತೀಚೆಗೆ ಶಾಸಕರು ಕಲಾಪದಲ್ಲಿ ಪಾಲ್ಗೊಳ್ಳಲು ತೀವ್ರ ನಿರಾಸಕ್ತಿ ತೋರಿಸುತ್ತಿದ್ದಾರೆ.

ಚುನಾವಣೆಯಲ್ಲಿ ಸ್ಪರ್ಧಿಸಿ ಗೆಲ್ಲಲು ತೋರಿಸುವ ಆಸಕ್ತಿಯನ್ನು ಶಾಸಕರು, ವಿಧಾನ ಮಂಡಳ ಅಧಿವೇಶನದಲ್ಲಿ ಪಾಲ್ಗೊಳ್ಳಲು ತೋರಿಸುತ್ತಿಲ್ಲ. ಪ್ರತಿದಿನ ಪ್ರತಿಪಕ್ಷ ನಾಯಕರು ಸರ್ಕಾರದ ಮೇಲೆ ಆರೋಪ ಮಾಡಿ ಸಚಿವರು ಮತ್ತು ಶಾಸಕರು ಕಲಾಪದಲ್ಲಿ ಪಾಲ್ಗೊಳ್ಳುತ್ತಿಲ್ಲ ಎಂದು ತಕರಾರು ತೆಗೆಯುತ್ತಿರುವುದು ಮಾಮೂಲಿಯಾಗಿದೆ.

224 ಸದಸ್ಯ ಬಲದ ಸದನದಲ್ಲಿ ನಿನ್ನೆ ಸನದಕ್ಕೆ ಹಾಜರಾದವರು ಕೇವಲ 60, 120 ಸದಸ್ಯ ಬಲದ ಕಾಂಗ್ರೆಸ್‌ನಲ್ಲಿ 30 ಮಂದಿ ಮಂದಿ ಸದನದಲ್ಲಿದ್ದರು. ಬಿಜೆಪಿ ಒಟ್ಟು ಸದಸ್ಯ ಬಲ-43, ಹಾಜರಾದವರು-18, ಇದೇ ರೀತಿ ಜೆಡಿಎಸ್ ಶಾಸಕರ ಒಟ್ಟು ಸಂಖ್ಯೆ-40, ಹಾಜರಾದವರು-11 ಮಂದಿ ಮಾತ್ರ, ಇನ್ನು ಐವರು ಪಕ್ಷೇತರರ ಪೈಕಿ ಹಾಜರಾದವರು ಒಬ್ಬರು ಮಾತ್ರ. ≫ 5ನೇ ಪುಟಕ್ಕೆ

> **ವಿಧಾನಸಭೆ ಕಲಾಪಕ್ಕೆ ಹಾಜರಾಗಲು ಪ್ರತಿ ದಿನ ಎರಡು ಸಾವಿರ ರೂ ದಿನ ಭತ್ಯ ಪಡೆಯುತ್ತಾರೆ. ಕ್ಷೇತ್ರದಿಂದ ಬೆಂಗಳೂರಿಗೆ ಬರಲು ಪ್ರತಿ ಕಿ.ಮೀಗೆ 25 ರೂ ಭತ್ಯ, ಹತ್ತು ದಿನಗಳ ಅವಧಿಗೆ 25 ರೂ. ಕಲಾಪದ ಅವಧಿ ಹೆಚ್ಚಾದರೆ, ಇದು 30 ರೂ.ಗೆ ಏರುತ್ತದೆ. ಇನ್ನು ಶಾಸಕರ ಮಾಸಿಕ ವೇತನ-20,000 ರೂ, ಐದು ಸಾವಿರ ರೂ ದೂರವಾಣಿ ಭತ್ಯೆ, 50 ಸಾವಿರ ರೂ ಕಚೇರಿ ನಿರ್ವಹಣಾ ಭತ್ಯೆ, ಇಬ್ಬರು ಆಪ್ತ ಸಹಾಯಕರಿಗೆ ಮಾಸಿಕ ತಲಾ 10,000 ರೂ. ವೇತನ ನೀಡಲಾಗುತ್ತದೆ.**

